DEEDS
# ಸಂವಾದ
ಸಮತೆಯ ಸಮಾಜದೆಡೆಗೆ

ಸಂವಾದ 4

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿಮ್ಮೊಂದಿಗೆ ..........

ಮತ್ತೊಂದು ಕ್ಯಾಲೆಂಡರ್ ಬದಲಾಗಿದೆ. 2018 ನೇ ಇಸವಿ ಮಹಿಳೆಯರ ಪಾಲಿಗೆ ಚರಿತ್ರಾರ್ಹ ವರ್ಷ. ವರ್ಷದ ಉತ್ತರಾರ್ಧದಲ್ಲಿ ಹೊರಬಂದ ಸುಪ್ರೀಂ ಕೋರ್ಟಿನ ಕೆಲ ತೀರ್ಪುಗಳು ಮಹಿಳಾ ಹಕ್ಕುಗಳಿಗೆ ಸಂಬಂಧಿಸಿದ್ದಾಗಿದ್ದು, ಮಹಿಳೆಯರ ಪಾಲಿಗೆ ಮಹತ್ತ್ವದ್ದಾಗಿವೆ. ಈ ತೀರ್ಪುಗಳನ್ನು ಸ್ವಾಗತಿಸುತ್ತ ನಮ್ಮ ಜವಾಬ್ದಾರಿಗಳನ್ನು ಅವಲೋಕಿಸಿಕೊಳ್ಳುವುದಕ್ಕೆ ಹೊಸ ವರ್ಷದ ಆರಂಭವನ್ನು ವೇದಿಕೆಯಾಗಿಸಿಕೊಳ್ಳೋಣ.

- ವ್ಯಭಿಚಾರವನ್ನು ಅಪರಾಧವೆಂದು ಪರಿಗಣಿಸಿ 158 ವರ್ಷಗಳ ಹಿಂದೆ ರೂಪಿಸಲಾಗಿದ್ದ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 497 ನ್ನು ಅಸಾಂವಿಧಾನಿಕ ಎಂದು ಘೋಷಿಸಿ ಸರ್ವೋಚ್ಚ ನ್ಯಾಯಾಲಯವು ಮಹತ್ತರ ತೀರ್ಪು ನೀಡಿದೆ. ಸೆಕ್ಷನ್ 497 ರ ಪ್ರಕಾರ ಯಾರೇ ವ್ಯಕ್ತಿಯು ವಿವಾಹಿತ ಮಹಿಳೆಯೊಡನೆ ಆಕೆಯ ಗಂಡನ ಸಮ್ಮತಿಯಿಲ್ಲದೆ ಲೈಂಗಿಕ ಸಂಬಂಧ ಹೊಂದಿದ್ದರೆ ಅಂತಹ ಸಂಬಂಧ ವ್ಯಭಿಚಾರ ಎನಿಸಿಕೊಳ್ಳುತ್ತದೆ. ಅವಿವಾಹಿತ ಸ್ತ್ರೀ ಅಥವಾ ಗಂಡ ಸತ್ತ ಹೆಣ್ಣಿನೊಡನೆ ವಿವಾಹಿತನೊಬ್ಬ ಹೊಂದುವ ವಿವಾಹ ಬಾಹಿರ ಸಂಬಂಧವನ್ನು ಈ ಕಾನೂನಿನ ವ್ಯಾಪ್ತಿಯಲ್ಲಿ ತಂದಿಲ್ಲ. ಇದಕ್ಕೆ ಕಾರಣ ವಿವಾಹದ ಬಳಿಕ ಮಹಿಳೆ ಗಂಡನ ಸೊತ್ತು ಎಂದು ಕಾನೂನು ಕೂಡಾ ಪರಿಗಣಿಸಿರುವುದು ಮತ್ತು ಸ್ತ್ರೀ ಪುರುಷರನ್ನು ಸಮಾನರು ಎಂದು ಪರಿಗಣಿಸದೆ ಇರುವುದು. ಹಾಗಾಗಿ ವಿವಾಹಬಾಹಿರ ಸಂಬಂಧವನ್ನು ವಿವಾಹಿತ ಸ್ತ್ರೀಯೊಡನೆ ಹೊಂದಿದ್ದರೆ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಿರುವ ಪುರುಷ ಅಂತಹ ಸಂಬಂಧವನ್ನು ಅವಿವಾಹಿತ ಸ್ತ್ರೀಯೊಡನೆ ಅಥವಾ ಗಂಡ ಸತ್ತ ಹೆಣ್ಣಿನೊಡನೆ ಹೊಂದಿದ್ದರೆ ಅಪರಾಧ ಎನಿಸುವುದಿಲ್ಲ. ವಿವಾಹಿತ ಸ್ತ್ರೀಯೊಡನೆ ವ್ಯಭಿಚಾರ ಸಂಬಂಧ ಹೊಂದಿರುವ ವ್ಯಕ್ತಿಯ ವಿರುದ್ಧ ವಿವಾಹಿತ ಸ್ತ್ರೀಯ ಪತಿ ಕ್ರಿಮಿನಲ್ ಮೊಕದ್ದಮೆ ಹೂಡಬಹುದು. ಆದರೆ, ವ್ಯಭಿಚಾರದಲ್ಲಿ ತೊಡಗಿರುವ ತನ್ನ ಗಂಡನ ಮೇಲಾಗಲೀ, ಅಥವಾ ತನ್ನ ಗಂಡನು ಲೈಂಗಿಕ ಸಂಬಂಧ ಬಳಸಿದ ವಿವಾಹಿತ ಮಹಿಳೆಯ ಮೇಲಾಗಲೀ ಕಾನೂನು ಕ್ರಮ ತೆಗೆದುಕೊಳ್ಳಲು ವ್ಯಭಿಚಾರದಲ್ಲಿ ತೊಡಗಿದ ವ್ಯಕ್ತಿಯ ಹೆಂಡತಿಗೆ ಅವಕಾಶವಿಲ್ಲ. ಇದನ್ನೆಲ್ಲ ಗಮನಿಸಿ ನ್ಯಾಯಾಲಯ ಈ ಕಾನೂನನ್ನು ಮಹಿಳಾ ವಿರೋಧಿ ಎಂದು ಪರಿಗಣಿಸಿದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯವು ಹೆಂಡತಿಯು ಗಂಡನ ಆಸ್ತಿಯಲ್ಲ. ಗಂಡ ಹೆಂಡತಿಯ ಮಾಲೀಕನಲ್ಲ ಎಂದು ತೀರ್ಪಿನಲ್ಲಿ ಅಭಿಪ್ರಾಯ ಪಟ್ಟಿದೆ. ಸಾಮಾಜಿಕ, ನೈತಿಕ ಮೌಲ್ಯಗಳ ಮಾನದಂಡದಿಂದ ಮತ್ತು ವೈಯಕ್ತಿಕ ಸಂಬಂಧಗಳ ಮಾನದಂಡದಿಂದ ವಿವಾಹಬಾಹಿರ ಸಂಬಂಧ ಯಾವತ್ತಿಗೂ ಅನಪೇಕ್ಷಣೀಯವೇ. ಆದರೆ, ಸರ್ವೋಚ್ಚ ನ್ಯಾಯಾಲಯದ ಈ ತೀರ್ಪು ಮಹಿಳಾ ಅಸ್ಮಿತೆಯ ದೃಷ್ಟಿಯಿಂದ, ಸಂವಿಧಾನದತ್ತ ಸ್ತ್ರೀಪುರುಷ ಸಮಾನತೆಯ ದೃಷ್ಟಿಯಿಂದ ನಮಗೆ ಮಹತ್ತ್ವದ್ದು ಎನಿಸುತ್ತದೆ.

- ತ್ರಿವಳಿ ತಲಾಖ್ ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಹೇಳಿದೆ. ಈ ಹಿನ್ನೆಲೆಯಲ್ಲಿ ತ್ರಿವಳಿ ತಲಾಖ್ ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸುವ ಐತಿಹಾಸಿಕ ಸುಗ್ರೀವಾಜ್ಞೆಗೆ ಕೇಂದ್ರ ಸಂಪುಟ ಸಮಿತಿ ಒಪ್ಪಿಗೆಯ ಮುದ್ರೆ ಒತ್ತಿದೆ. ಇದು ರಾಜ್ಯ ಸಭೆಯಲ್ಲಿ ಮಂಡಿತವಾಗಿದ್ದರೂ ಅದು ಕಾಯಿದೆಯಾಗಿ ಅನುಮೋದನೆಗೊಂಡಿಲ್ಲ. ಸುಗ್ರೀವಾಜ್ಞೆಯ ಪ್ರಕಾರ ದಿಢೀರ್ ತ್ರಿವಳಿ ತಲಾಖ್ ನೀಡುವವರು ಮೂರು ವರ್ಷ ಜೈಲು ಶಿಕ್ಷೆಯ ಜತೆಗೆ ದಂಡ ಕಟ್ಟಬೇಕಾಗುತ್ತದೆ. ಅದು ಜಾಮೀನು ರಹಿತ ಅಪರಾಧವಾಗಿದ್ದು ತಲಾಖ್ ನೀಡುವವನು ಪತ್ನಿ ಹಾಗೂ ತನ್ನ ಮಕ್ಕಳಿಗೆ ನಿರ್ವಹಣಾ ವೆಚ್ಚವನ್ನು ಪಾವತಿಸಬೇಕಾಗುತ್ತದೆ. ತ್ರಿವಳಿ ತಲಾಖ್ ಮುಖ್ಯವಾಗಿ ಮುಸ್ಲಿಂ ಮಹಿಳೆಯರಿಗೆ ಸಂಬಂಧಿಸಿದ್ದು. ಅದು ಮುಸ್ಲಿಂ ಪುರುಷರ ಕೈಯಲ್ಲಿ ಮಹಿಳೆಯರ ಶೋಷಣೆಯನ್ನು ತಡೆಯುತ್ತದೆ ಎಂದು ಬಿಂಬಿಸಲಾಗಿದೆ. ಈ ಕಾಳಜಿ ನೈಜವಾಗಿದ್ದಲ್ಲಿ ಈ ಕಾನೂನನ್ನು ರೂಪಿಸುವಾಗ ತ್ರಿವಳಿ ತಲಾಖನ್ನು ವಿರೋಧಿಸುತ್ತಿರುವ ಮುಸ್ಲಿಂ ಮಹಿಳಾ ಸಂಘಟನೆಗಳ ಜತೆ ಯಾಕೆ ಸಮಾಲೋಚಿಸಲಿಲ್ಲ ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ. ಈ ಪ್ರಕರಣದಲ್ಲಿ ದಾವೆ ಹೂಡಿದ ಮಹಿಳಾ ಗುಂಪೊಂದು ಮಸೂದೆಯನ್ನು ಅಂತಿಮಗೊಳಿಸುವ ಮೊದಲು ಅದರ ಮೇಲೆ ವಿಸ್ತೃತ ಚರ್ಚೆಯಾಗಬೇಕು ಎಂದು ಆಗ್ರಹಿಸಿತ್ತು. ಜತೆಗೆ ಆ ಪದ್ಧತಿಯನ್ನು ಅಪರಾಧೀಕರಿಸುವುದನ್ನು ವಿರೋಧಿಸಿತ್ತು. ಇಲ್ಲಿ ನಾವು ತಿಳಿದುಕೊಳ್ಳಬೇಕಾದುದೇನೆಂದರೆ, ಈ ಕಾನೂನಿನಲ್ಲಿ ಹಲವಾರು ಲೋಪಗಳಿವೆ. ಜೀವನ ನಿರ್ವಹಣೆಯ ಪರಿಹಾರದ ಬಗ್ಗೆ ಇದು ಏನನ್ನೂ ಹೇಳುವುದಿಲ್ಲ. ಜೈಲಿನಲ್ಲಿರುವ ವ್ಯಕ್ತಿ ನಿರ್ವಹಣಾ ವೆಚ್ಚವನ್ನು ನೀಡುವುದಾದರೂ ಹೇಗೆ? ಒಮ್ಮೆ ಪುರುಷನಿಗೆ ಜೈಲು ಶಿಕ್ಷೆಯಾದರೆ ಮತ್ತೆ ಅವರ ನಡುವೆ ಸಂಧಾನ ಸಾಧ್ಯತೆ ಇರಲಾರದು. ಇಂತಹ ಕಠಿಣ ಕ್ರಮಗಳು ಮಹಿಳೆಯರಿಗೆ ಮುಳುವಾಗುವ ಸಾಧ್ಯತೆಗಳೇ ಹೆಚ್ಚು. ರಾಜ್ಯ ಸಭೆಯಲ್ಲಿ ಈ ಮಸೂದೆಯನ್ನು ಅಂಗೀಕರಿಸುವ ಮೊದಲು ಈ ಎಲ್ಲ ಅಂಶಗಳನ್ನು ಪರಿಶೀಲಿಸುವುದು ಸರಕಾರದ ಹೊಣೆಗಾರಿಕೆಯಾಗಿದೆ.

- ಕೇರಳದ ಶಬರಿಮಲೆ ದೇವಸ್ಥಾನ ಪ್ರವೇಶಕ್ಕೆ ಮುಟ್ಟಿನ ಕಾರಣಕ್ಕೆ 10 ವರ್ಷಕ್ಕೆ ಮೇಲ್ಪಟ್ಟ ಹಾಗೂ 50 ವರ್ಷದೊಳಗಿನ ಮಹಿಳೆಯರಿಗೆ ಇದ್ದ ನಿಷೇಧವನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸಿದೆ. ಆ ಮೂಲಕ ಮಹಿಳೆಯರ ಹಕ್ಕು, ಧಾರ್ಮಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಿದೆ. ಮಹಿಳಾಪರವಾದ ಈ ತೀರ್ಪನ್ನು ಮಹಿಳೆಯರ ಮೂಲಕವೇ ವಿರೋಧಿಸಲು ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರನ್ನು ಕೇರಳದ ಹಲವೆಡೆಗಳಲ್ಲಿ ಬೀದಿಗಿಳಿಸಲಾಗಿದೆ. ದೇವಾಲಯ ಪ್ರವೇಶಿಸುವ ಮಹಿಳೆಯರ ಪ್ರಯತ್ನಕ್ಕೆ ಹಿಂಸಾತ್ಮಕ ರೀತಿಯಲ್ಲಿ ತಡೆ ಒಡ್ಡಲಾಗಿದೆ (ಬಿಗಿ ಭದ್ರತೆಯ ನಡುವೆಯೇ ಮೂವರು ಮುಟ್ಟು ನಿಲ್ಲದ ಮಹಿಳೆಯರು ದೇವಾಲಯ ಪ್ರವೇಶ ಮಾಡಿದ್ದಾರೆ). ದೇವಾಲಯ ಪ್ರವೇಶ ನಿಷೇಧವನ್ನು ಸಮಾಜದ ಬಹುದೊಡ್ಡ ಜನವರ್ಗ ಸಮರ್ಥಿಸುತ್ತಿದೆ. ನಮ್ಮ ಸಮಾಜ ಎಷ್ಟೊಂದು ಪುರುಷಶಾಹಿ ಎಂಬುದು ಇಲ್ಲಿ ಸಾಬೀತಾಗಿದೆ. ಮುಟ್ಟು ಹಾಗೂ ಇತರ ಜೈವಿಕ ಬದಲಾವಣೆಗಳ ಕಾರಣಕ್ಕೆ ಭಾರತದಲ್ಲಿ ಸಾವಿರಾರು ವರ್ಷಗಳಿಂದ ಮಹಿಳೆಯರನ್ನು ಧಾರ್ಮಿಕ ಆಚರಣೆಗಳಿಂದ ದೂರವೇ ಇಡಲಾಗಿದೆ. ಸೃಷ್ಟಿ ಕ್ರಿಯೆಗೆ ಕಾರಣವಾಗುವ ಮುಟ್ಟನ್ನು ಮೈಲಿಗೆ ಎಂದು ಬಿಂಬಿಸಿರುವ ಗಂಡಾಳ್ವಿಕೆಯ ಸಮಾಜ ಮುಟ್ಟಿನ ಮೂಲವನ್ನು ಕೊಳಕು ಎಂದು ಮಹಿಳೆಯರಲ್ಲಿ ಮೌಢ್ಯ ಬಿತ್ತುತ್ತಾ ಬಂದಿದೆ. ಈ ರೂಢೀಗತ ಮೌಢ್ಯಗಳ ಅಡಿಪಾಯವನ್ನು ಅಲುಗಾಡಿಸುವಂತಹ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿರುವುದರಿಂದ ಅದು ಕೊಂಚ ವಿಚಲಿತ ಗೊಂಡಿದೆ. ಹಾಗಾಗಿ ಮಹಿಳೆಯರನ್ನು ಗುರಾಣಿ ಮಾಡಿಕೊಂಡು ಈ ತೀರ್ಪನ್ನು ವಿರೋಧಿಸುತ್ತಿದೆ. ಅದು ತಮ್ಮನ್ನು ಬಳಸಿಕೊಳ್ಳುತ್ತಿದೆ ಎಂಬ ಅರಿವು ಬೀದಿಗಿಳಿದ ಮಹಿಳೆಯರಿಗೆ ಬಂದಂತಿಲ್ಲ. ಗಂಡಾಳ್ವಿಕೆ ವ್ಯವಸ್ಥೆಯ ಹುನ್ನಾರಗಳನ್ನು ಎದುರಿಸಿ ನಿಲ್ಲಲು ಮಹಿಳಾ ಶಕ್ತಿಯನ್ನು ಸಿದ್ಧಪಡಿಸಲು ನಾವು ಹೆಚ್ಚು ಹೆಚ್ಚು ಕೆಲಸ ಮಾಡಬೇಕಿದೆ.

# ಮೀಟೂ : ಕಥೆಯೊಳಗಿನ ವ್ಯಥೆ

ಮಹಿಳೆಯರು ಮತ್ತು ಪುರುಷರು ಒಟ್ಟಾಗಿ ದುಡಿಯುವ ಸ್ಥಳದಲ್ಲಿ ಪುರುಷಾಧಿಕಾರಿಗಳು ತನ್ನ ಕೈ ಕೆಳಗಿನ ಮಹಿಳೆಯರ ಮೇಲೆ ಕೆಟ್ಟ ದೃಷ್ಟಿ ಹರಿಸುವುದು ಮತ್ತು ಆಕೆಯನ್ನು ದಕ್ಕಿಸಿಕೊಳ್ಳಲು ತನ್ನ ಅಧಿಕಾರ ಬಲ ಪ್ರಯೋಗಿಸುವುದು ಕಂಡು ಕೇಳರಿಯದ ವಿದ್ಯಮಾನವೇನಲ್ಲ. ಇದು ಕೇವಲ ಒಂದು ಕಛೇರಿ, ಒಂದು ವೃತ್ತಿ ಅಥವಾ ಒಂದು ದೇಶಕ್ಕೆ ಸೀಮಿತವಾದದ್ದಲ್ಲ. ಸಿನೆಮಾ, ಕ್ರೀಡೆ, ಶಿಕ್ಷಣ, ವೈದ್ಯಕೀಯ, ಪೊಲೀಸ್, ಕಾನೂನು, ಮಾಧ್ಯಮ, ಆಡಳಿತಶಾಹಿ ಮತ್ತು ರಾಜಕೀಯ ಸೇರಿದಂತೆ ಎಲ್ಲ ರಂಗಗಳಲ್ಲಿನ ಕಥೆಯೂ ಇದೇ. ಇಲ್ಲಿನ ಕಥೆಯೊಳಗಿನ ವ್ಯಥೆಯನ್ನು ಬಹಿರಂಗವಾಗಿ ಹೊರಹಾಕಿದವರ ಸಂಖ್ಯೆ ಕಡಿಮೆ. ಹಾಗಾಗಿ ಈ ಬಗ್ಗೆ ಚರ್ಚೆಗಳು ನಡೆದಿರುವುದು ಅಪರೂಪ. ಇದೀಗ ಹಲವಾರು ಮಹಿಳೆಯರು ವರ್ಷಾನುಗಟ್ಟಲೆ ಮೌನದಲ್ಲಿ ಹುದುಗಿ ಹೋಗಿದ್ದಂತಹ ಆಕ್ರೋಶ, ನೋವು ಹಾಗೂ ಅಸಹಾಯಕತೆಗಳ ಕಥಾನಕಗಳನ್ನು ಒಂದರ ಮೇಲೊಂದರಂತೆ ಬಹಿರಂಗ ಗೊಳಿಸುತ್ತಿದ್ದಾರೆ.




ಏನಿದು ಮೀಟೂ? ಲೈಂಗಿಕ ಶೋಷಣೆಗೆ ಒಳಗಾದ ಮಹಿಳೆಯರು ತಮ್ಮ ಸುತ್ತ ಮುತ್ತಲಿನ ಸಮಾಜ ಏನೆಂದು ಕೊಂಡೀತೆಂದು ಸುಮ್ಮನಾಗದೆ 'ನಾನೂ ಸಹ ಅಂಥ ಶೋಷಣೆಗೆ ಒಳಗಾಗಿದ್ದೇನೆ' ಎಂದು ಬಹಿರಂಗವಾಗಿ ಹೇಳಿಕೊಳ್ಳುವುದು ಮತ್ತು ಹಾಗೆ ಹೇಳುವ ಮೂಲಕ ಶೋಷಣೆ ಮಾಡಿದ 'ಪ್ರತಿಷ್ಠಿತರ' ಮುಖವಾಡ ಕಳಚುವ, ಅವರ ವಿರುದ್ಧ ಕ್ರಮಕ್ಕೆ ಒತ್ತಾಯಿಸುವ ಅಭಿಯಾನ 'ಮೀಟೂ'. 'ಈ ದೇಹ ನನ್ನದು. ಅದಕ್ಕೆ ಅವಮಾನವಾದರೆ ಕೇಳಬೇಕಾದವಳು ನಾನು, ತನ್ನ ಅವಮಾನಿತ ಅವಸ್ಥೆಗೆ ಜವಾಬ್ದಾರಳು ನಾನಲ್ಲ, ನೀನು' ಎಂದು ಈ ವರೆಗೆ ತನ್ನ ಹೆಗಲ ಮೇಲಿದ್ದ ಜವಾಬ್ದಾರಿಯನ್ನು ವರ್ಗಾಯಿಸುತ್ತಿರುವ ಹಲವು ನಿಟ್ಟುಸಿರುಗಳ ಮೊತ್ತ ಇದು. ಕಳೆದೊಂದು ವರ್ಷದಿಂದ ಅಮೆರಿಕಾದಲ್ಲಿ ನಡೆಯುತ್ತಿದ್ದ ಮೀಟೂ ಅಭಿಯಾನ ಇದೀಗ ಭಾರತಕ್ಕೂ ಕಾಲಿಟ್ಟಿದೆ. ಈ ಅಭಿಯಾನ ಸಿನೆಮಾ–ಮಾಧ್ಯಮ ಜಗತ್ತಿನ ಲೈಂಗಿಕ ಕಿರುಕುಳಗಳನ್ನು ಸಮಾಜದ ಮುಂದಿಡಲು ಒಂದು ವೇದಿಕೆಯನ್ನು ತೆರೆದಿಟ್ಟಿದೆ.

ಮೊದಲು ಭಾರತದಲ್ಲಿ ಮಲೆಯಳ ಸಿನೆಮಾ ಜಗತ್ತಿನ ಕಲಾವಿದೆಯರ ಆತ್ಮ ಗೌರವ– ಘನತೆಯನ್ನು ಎತ್ತಿ ಹಿಡಿಯುವ ಚರ್ಚೆ ಮೇ, 2017 ರಲ್ಲಿ ಆರಂಭವಾಯಿತು. ದಿಲೀಪ್ ಎಂಬ ನಟನ ವಿರುದ್ಧ ನಟಿಯೊಬ್ಬರು ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ಮಲೆಯಾಳದ ಪ್ರಮುಖ ಕಲಾವಿದೆಯರು 'ವಿಮೆನ್ ಇನ್ ಸಿನೆಮಾ ಕಲೆಕ್ಟಿವ್' ಶುರು ಮಾಡಿದರು. ಅನಂತರ ಹಾಲಿವುಡ್‌ನಲ್ಲಿ ಅಕ್ಟೋಬರ್ 2017 ರಲ್ಲಿ ನಿರ್ಮಾಪಕ ಹಾರ್ವೆ ವೆಯಿನ್ಸ್ಟೀನ್‌ನ ವಿರುದ್ಧ ನಟಿ ಅಲಿಸಾ ಮಿಲಾನೋ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದಾಗ 'ಮೀಟೂ' ಹ್ಯಾಶ್‌ಟ್ಯಾಗ್ ಹಾಕಿ ಅಭಿಯಾನ ಆರಂಭಿಸಲಾಯಿತು. ಇದು ಬಿರುಸಾಗಿ ಮುಂದುವರೆದು ಬಹುಜನರು ಅಭಿಮಾನದಿಂದ ನೋಡುವ, ಮಾದರಿಗಳೆಂದು ಆರಾಧಿಸುವ ಸಿನೆಮಾ ಲೋಕದ 'ಗಣ್ಯ' ಪುರುಷರ ಬಣ್ಣ ಬಯಲಾಯಿತು.

2018ರಲ್ಲಿ ಭಾರತದ ನಟಿ ತನುಶ್ರೀ ದತ್ತಾ ನಟ ನಾನಾ ಪಾಟೇಕರ್ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದಾಗ ತಾವೂ ಹೇಳಿ ಹಗುರಾಗುವ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಯಿತು. ಪ್ರಿಯಾ ರಮಣಿ ಎಂಬ ಪತ್ರಕರ್ತೆ ಎಂ ಜೆ ಅಕ್ಬರ್ ಎಂಬ ಪ್ರಭಾವಿ ಪತ್ರಕರ್ತ– ರಾಜಕಾರಣಿ, ಮಂತ್ರಿಯ ವಿರುದ್ಧ ಮಾತಾಡಿ ಆತ ರಾಜೀನಾಮೆ ನೀಡುವುದಕ್ಕೆ ಕಾರಣಳಾದಳು. ಇದರ ಬೆನ್ನಲ್ಲೇ ಕನ್ನಡ ಸಿನೆಮಾ ರಂಗದ ಶ್ರುತಿ ಹರಿಹರನ್ ಮುಂತಾದವರು ಇದುವರೆಗೆ ಬಚ್ಚಿಟ್ಟುಕೊಂಡ ಒಳ ಸಂಕಟಗಳಿಗೆ ಧ್ವನಿ ನೀಡಿದರು.

ಲೈಂಗಿಕ ದೌರ್ಜನ್ಯದ ವಿರುದ್ಧ ನಮ್ಮಲ್ಲಿ ಬಲವಾದ ಕಾನೂನಿದೆ. ಆದರೆ ಈ ಕಾನೂನು ಲೆಕ್ಕಕ್ಕೇ ಇಲ್ಲ ಎಂಬಂತೆ ದೌರ್ಜನ್ಯಗಳು ನಡೆಯುತ್ತಿವೆ ಎಂಬುದು ವಿಷಾದನೀಯ. ದುಡಿಯುವ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಕಿರುಕುಳಗಳ ವಿರುದ್ಧ ಮಹಿಳೆಯರದು ಇದುವರೆಗೆ ಏಕಾಂಗಿ ಹೋರಾಟವಾಗಿತ್ತು. ಈ ಅಭಿಯಾನ ಮಹಿಳೆಯರಿಗೆ ಸಂಘಟಿತ ಬಲ ನೀಡಿದೆ; ಆದರೆ, ಈ ಅಭಿಯಾನಕ್ಕೆ ಮಾಧ್ಯಮಗಳಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯಗಳು ಪುರುಷ ಪ್ರಧಾನ ಧೋರಣೆಯನ್ನು ಅಸಹನೆಯನ್ನು ಇನ್ನಿಲ್ಲದಂತೆ ಹೊರಹಾಕಿವೆ. ಮೀಟೂ ಮೇಲ್ವರ್ಗದ ಮಹಿಳೆಯರ ಪ್ರಚಾರ ತಂತ್ರ, ನಿತ್ಯ ದೌರ್ಜನ್ಯ ಎದುರಿಸುತ್ತಿರುವ ಅಸಂಖ್ಯಾತ ಅಸಹಾಯಕ ಮಹಿಳೆಯರ ಬಗ್ಗೆ ಏಕೆ ದನಿ ಎತ್ತುವುದಿಲ್ಲ ಎಂದು ಪ್ರಶ್ನಿಸುವವರು ಒಂದು ಅಂಶವನ್ನು ಅರ್ಥ ಮಾಡಿಕೊಳ್ಳಬೇಕು. ಮೀಟೂ ವ್ಯಕ್ತಿಗತ ಅಭಿಯಾನವಲ್ಲ. ಈ ಅಭಿಯಾನದ ಆಶಯಗಳಿಗೆ ಗೋಡೆಗಳಿಲ್ಲ. ವಿದ್ಯೆ, ಸ್ಥಾನಮಾನ, ಹಣ ಕೀರ್ತಿ ಎಲ್ಲ ಇರುವ ಥಳುಕಿನ ಲೋಕದಲ್ಲೂ ಹೆಣ್ಣು ಶೋಷಿತಳು ಎಂಬುದು ಎಲ್ಲರ ಅರಿವಿಗೆ ದಕ್ಕ ತೊಡಗಿದೆ. ಈ ಅಭಿಯಾನವನ್ನು ದಿನ ನಿತ್ಯ ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗಿಯೂ ಕತ್ತಲಲ್ಲಿ ಉಳಿಯುವ ಸಮಾಜದ ಕಟ್ಟ ಕಡೆಯ ಹೆಣ್ಣುಮಕ್ಕಳ ಬಳಿ ಒಯ್ಯುವ ಜವಾಬ್ದಾರಿ ಚಳುವಳಿಗಳು ಮತ್ತು ಪ್ರಜ್ಞಾವಂತರದ್ದಾಗಿದೆ.

# ಸಂಚಲನದ ದಶಮಾನೋತ್ಸವ



ಕರ್ನಾಟಕ ರಾಜ್ಯ ಮಹಿಳಾ ತರಬೇತುದಾರರ ಸಂಚಲನದ ದಶಮಾನೋತ್ಸವ ಸಮಾರಂಭದ ಉದ್ಘಾಟನೆಯು ಮಂಗಳೂರಿನಲ್ಲಿ ಡಿ.10 ರಂದು ಅರ್ಥಪೂರ್ಣವಾಗಿ ನಡೆಯಿತು.ಲೇಖಕಿ ಜ್ಯೋತಿ ಚೇಳ್ಯಾಯರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪೊಲೀಸ್ ಸುಪರಿಂಟೆಂಡೆಂಟ್ ಶ್ರುತಿ ಎನ್ ಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶೋಭಾ, ಕಾನೂನು ಸೇವಾ ಪ್ರಾಧಿಕಾರದ ಮಲ್ಲನ ಗೌಡ ಮುಖ್ಯ ಅತಿಥಿಗಳಾಗಿದ್ದರು. ಸಂಚಲನದ ರಾಜ್ಯಾಧ್ಯಕ್ಷೆ ರಾಣಿ ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಮರ್ಲಿನ್ ಮಾರ್ಟಿಸ್ ಉಪಸ್ಥಿತರಿದ್ದರು. ಚಿತ್ರದುರ್ಗ, ದ.ಕ., ಉಡುಪಿ, ಗದಗ, ಕೊಪ್ಪಳ, ಮಂಡ್ಯ, ಹಾಸನ, ಧಾರವಾಡ ಜಿಲ್ಲೆಗಳ ಸದಸ್ಯೆಯರು ಆಗಮಿಸಿದ್ದರು. ಸಭಾ ಕಾರ್ಯಕ್ರಮದ ಬಳಿಕ ಸದಸ್ಯೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# ಗದಗ ಜಿಲ್ಲೆ

## ಪೂರಕ ಕಾನೂನು ಸುಗಮಗಾರರ ತರಬೇತಿ ಹಂತ 3



ಮೂರನೆಯ ಹಂತದ ತರಬೇತಿಯು ಮಹಿಳಾ ಪ್ರಕರಣಗಳ ನಿರ್ವಹಣೆ ವಿಷಯದ ಮೇಲೆ ನಡೆಯಿತು. ಗದಗ ಜಿಲ್ಲಾ ತರಬೇತಿಯು ಗದಗಿನ ಮರಾಠಾ ವಿದ್ಯಾವರ್ಧಕ ಸಂಘದಲ್ಲಿ ನಡೆದಿದ್ದು ಒಟ್ಟು 23 ಮಂದಿ ಭಾಗವಹಿಸಿದ್ದರು. ಮಹಿಳಾ ಪ್ರಕರಣಗಳ ನಿರ್ವಹಣೆ, ದೂರು ಅರ್ಜಿ ಬರವಣಿಗೆ, ಎಫ್‌ಐಆರ್, ಮಧ್ಯಸ್ಥಿಕೆ, ವಕಾಲತ್ತು, ಸುಗಮಗಾರಿಕೆ, ಆಪ್ತ ಸಮಾಲೋಚನೆ, ದಾಖಲೆಗಳ ಮಹತ್ವ ಇವುಗಳು ಮುಖ್ಯ ವಿಷಯಗಳಾಗಿದ್ದವು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ರೇಣುಕಾ ಜಿ ಕುಲಕರ್ಣಿ ಮತ್ತು ನಾರಿ ಅದಾಲತ್ ವೇದಿಕೆಯ ಜಯಮ್ಮ ಮತ್ತು ಪಾರ್ವತಿಯವರು ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಮರ್ಲಿನ್ ಮಾರ್ಟಿಸ್, ಮೋಹನಚಂದ್ರ, ತುಕಾರಾಮ ಎಕ್ಕಾರು ವಿವಿಧ ಕಲಾಪಗಳನ್ನು ನಿರ್ವಹಿಸಿದರು. ಫಕ್ಕೀರಮ್ಮ ಲಕ್ಕುಂಡಿ ಎಲ್ಲರನ್ನು ಸ್ವಾಗತಿಸಿ ವಂದಿಸಿದರು.

### ನಾವ್ ಹೀಂಗ ಮಾಡಿವ್ರೀ.... ನೀವೂ ಮಾಡ್ರೀ...

"ನಾನು ರೇಖಾ. ಗದಗದ ವಿಜಯನಗರ ಬಡಾವಣೆಯಲ್ಲಿ ನನ್ನ ಮನೆ. ನನ್ನ ಗಂಡನ ಮನೆ ಮದಗಾನೂರು ಗ್ರಾಮ. ನನ್ನ ಅತ್ತೆಗೆ ಇಬ್ಬರು ಗಂಡುಮಕ್ಕಳು ಹಾಗೂ ಮೂವರು ಹೆಣ್ಣು ಮಕ್ಕಳು. ದೊಡ್ಡ ಮಗನಿಗೆ ಎರಡು ಮಕ್ಕಳಿದ್ದಾರೆ. ನಾನು ಸಣ್ಣ ಮಗನ ಹೆಂಡತಿ. ನನ್ನ ಗಂಡನಿಗೆ ಮೊದಲೇ ಕ್ಯಾನ್ಸರ್ ಇತ್ತು. ವಿಷಯ ಗೊತ್ತಿದ್ದೂ ಮದುವೆ ಮಾಡಿದರು. ಮದುವೆಯಾಗಿ 5 ತಿಂಗಳಾಗುವಷ್ಟರಲ್ಲಿ ಗಂಡನಿಗೆ ತುಂಬಾ ಆರಾಮ ಇರಲಿಲ್ಲ. ಡಾಕ್ಟರ್ ಹತ್ತಿರ ತೋರಿಸಿದರೆ ಕ್ಯಾನ್ಸರ್ ಕೊನೆಯ ಹಂತದಲ್ಲಿದೆ ಎಂದು ಹೇಳಿದರು. ಆಗ ನಾನು 3 ತಿಂಗಳ ಗರ್ಭಿಣಿಯಾಗಿದ್ದೆ. ಗಂಡನಿಗೆ ಕಷ್ಟಪಟ್ಟು ಚಿಕಿತ್ಸೆ ಕೊಡಿಸಿದೆವು. ಕ್ಯಾನ್ಸರ್ ನಿಯಂತ್ರಣಕ್ಕೆ ಬರಲೇ ಇಲ್ಲ. ಇತ್ತ ನನಗೆ ಹೆಣ್ಣು ಮಗು ಹುಟ್ಟಿತು, ಅತ್ತ ಗಂಡ ಹಾಸಿಗೆ ಹಿಡಿದರು. ಮಗುವಿಗೆ ಒಂದೂವರೆ ತಿಂಗಳಾಗುವಾಗ ಗಂಡ ತೀರಿಹೋದರು. ಕೆಲವು ತಿಂಗಳುಗಳ ನಂತರ ಮಗುವಿನ ಜೊತೆ ನನ್ನ ತವರು ಮನೆಯಿಂದ ಗಂಡನ ಮನೆಗೆ ಹೋದೆ. ಅತ್ತೆ ಹಾಗೂ ಭಾವನ ಕಿರುಕುಳ ಶುರುವಾಯಿತು. ಹಿಂಸೆ ತಡೆಯಲಾರದೆ ಮತ್ತೆ ತಂದೆ ಮನೆಗೆ ಬಂದು ಅಲ್ಲೇ ಉಳಿದೆ. ಈಗ ನನ್ನ ಗಂಡನ ಪಾಲಿನ ಆಸ್ತಿ ಕೇಳಿದರೆ ಈಗ ಕೊಡುತ್ತೇವೆ, ಒಂದು ವರ್ಷ ಬಿಟ್ಟು ಕೊಡುತ್ತೇವೆ ಎಂದು ಸತಾಯಿಸುತ್ತಿದ್ದಾರೆ. ಹಿರಿಯರನ್ನು ಕೂಡಿಸಿ ಮಾತನಾಡಿದರೂ ಪ್ರಯೋಜನವಾಗಿಲ್ಲ. ನನ್ನ ಮಗಳ ಶಿಕ್ಷಣಕ್ಕೆ ತುಂಬಾ ಹಣದ ತೊಂದರೆ ಇದೆ".

ಹೀಗೆ, ರೇಖಾ ತನ್ನ ನೋವಿನ ಪರಿಸ್ಥಿತಿಯನ್ನು ಡೀಡ್ಸ್‌ನ ಗದಗಿನ ತರಬೇತಿ ಸಂಯೋಜಕರ ಬಳಿ ಹೇಳಿಕೊಂಡಳು. ಆಗ ಅವರು ಆಕೆಯ ಎಲ್ಲ ಮಾತುಗಳಿಗೆ ಕಿವಿಯಾಗಿ ಆಕೆಯನ್ನು ಸಂತೈಸಿ ಗದಗ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಹೋಗಿ ಸಲಹೆ, ಮಾರ್ಗದರ್ಶನ ಪಡೆದು ಮುನ್ನಡೆಯುವಂತೆ ಪ್ರೋತ್ಸಾಹಿಸಿದರು.

ರೇಖಾ, ದಿನಾಂಕ 30–5–2018 ರಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಹೋಗಿ ನ್ಯಾಯಾಧೀಶರಾದ ರೇಣುಕಾರವರನ್ನು ಭೇಟಿಯಾಗಿ ಪ್ರಕರಣದ ಕುರಿತು ಚರ್ಚಿಸಿದ್ದಾಳೆ. ನ್ಯಾಯಾಧೀಶರು ಆಸ್ತಿ ಕೇಳಿ ಅರ್ಜಿಯನ್ನು ಕೊಡುವಂತೆ ಹೇಳಿದರು. ಅಂತೆಯೇ ಆಕೆ ಅರ್ಜಿಯನ್ನು ಕೊಟ್ಟು ಬಂದಿದ್ದಾಳೆ. ಆಕೆಯ ಅರ್ಜಿಯನ್ನು ಪ್ರಾಧಿಕಾರವು ಬೆಂಗಳೂರಿಗೆ ಕಳುಹಿಸಿ ಸಂಗನಾಳ ಎಂಬ ವಕೀಲರನ್ನು ರೇಖಾ ಪರವಾಗಿ ನೇಮಿಸಿ ಆದೇಶ ನೀಡಿರುತ್ತದೆ.

ವಕೀಲರ ಸಲಹೆಯಂತೆ ರೇಖಾ ಈಗ ಕೆಲವು ದಾಖಲೆಗಳನ್ನು ಸಿದ್ಧಪಡಿಸುತ್ತಿದ್ದಾಳೆ. ಕೇಸು ಮುಂದುವರಿಯುತ್ತಿದೆ.

**ರೇಖಾಳ ನಡೆ ಮಾದರಿಯದು. ತನಗೆ ತೊಂದರೆಯಾದಾಗ ಅಳುತ್ತ ಕೂರದೆ ಮುಂದೇನು ಮಾಡಬೇಕು ಎಂಬ ಬಗ್ಗೆ ಮಾಹಿತಿ ಪಡೆದು ಹೆಜ್ಜೆ ಮುಂದಿಟ್ಟಿದ್ದಾಳೆ. ಆಕೆಯ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿ ಎಂಬುದು ನಮ್ಮೆಲ್ಲರ ಹಾರೈಕೆಯಾಗಿರಲಿ.**

### 'ಹೆಂಡತಿಗೆ ಹೊಡೆದ್ರೆ ಜೈಲಿಗೆ ಹಾಕ್ತಾರಾ..' ಹೀಂಗ ಹೆದರ್‍ಸ್ಯಾಳಾ ನಮ್ಮ ದೇವಮ್ಮ..

ಕಣವಿ ಗ್ರಾಮದ ನಮ್ಮ ಓಣಿಯಲ್ಲಿ ಸ್ವಲ್ಪ ದಿನದ ಹಿಂದೆ ಒಬ್ಬ ತನ್ನ ಹೆಂಡತಿಯನ್ನು ಮನೆಯಿಂದ ಹೊರಗೆ ಹಾಕಿ ದನಕ್ಕೆ ಬಡಿದಂತೆ ಬಡಿಯುತ್ತಿದ್ದ. ಅದನ್ನು ನೋಡಿ ತಕ್ಷಣ ನಾವು ಓಣಿಯಲ್ಲಿ ಇರುವ ಹೆಣ್ಣು ಮಕ್ಕಳೆಲ್ಲ ಒಟ್ಟಾಗಿ ಹೋಗಿ ಹೊಡೀಬೇಡ ನಿಲ್ಲಿಸು ಎಂದೆವು. ಅದಕ್ಕೆ ಅವನು 'ನೀವು ಯಾರು ನನ್ನ ಕೇಳೋದಕ್ಕೆ? ನನ್ನ ಹೆಂಡತಿಯನ್ನು ನಾನು ಹೊಡೆಯುತ್ತೇನೆ, ನೀವು ಯಾರನ್ನು ಕರಕೊಂಡು ಬರ್‍ತೀರಾ ಬನ್ನಿ, ನಾನೂ ನೋಡೇ ಬಿಡ್ತೇನೆ' ಎಂದ. ದೇವಮ್ಮಳ ಬಳಿ ಹೆಂಡತಿಯ ಹೊಡೆಯುವುದು ತಪ್ಪು ಎನ್ನುವ




ಕ್ಯಾಲೆಂಡರ್ ಇತ್ತು. ಆಕೆ ಮನೆಗೆ ಓಡಿ ಬಂದು ಅದನ್ನು ತಗೊಂಡು ಹೋಗಿ ತೋರಿಸಿ 'ನೋಡು, ಹೆಂಡತಿಗೆ ಹೊಡೆದ್ರೆ ನಿನ್ನ ಜೈಲಿಗೆ ಹಾಕ್ತಾರ, ಹೊಡೀಬ್ಯಾಡ ಅಂತ ಹೇಳಿದಳು. ಅವ ಕ್ಯಾರೇ ಮಾಡದೆ 'ಏನ್ ಮಾಡ್ತೀರೊ ಮಾಡ್ರೀ.. ಯಾರನ್ನ ಬೇಕಾದ್ರೂ ಕರಕೊಂಡು ಬನ್ರೀ, ನಾನೂ ನೋಡೇ ಬಿಡ್ತೀನಿ' ಅಂತ ಜೋರಾಗಿ ಮಾತಾಡ್ದ. ಆಗ ಅಲ್ಲಿದ್ದ ಮಹಿಳೆಯರು 'ನಾವು ಯಾರನ್ನೂ ಕರಕೊಂಡು ಬರಲ್ಲ, ಮಹಿಳಾ ಸಹಾಯವಾಣಿಗೆ ಫೋನ್ ಮಾಡ್ತೇವಿ. ಅದು ಮೊದಲಿಗೆ ಬೆಂಗ್ಳೂರಿಗೆ ಹೋಗತೈತಿ, ಆಮೇಲೆ ಗದಗಗೆ ಹಚ್ಚಿ ಕೊಡ್ತಾರಾ, ಅವ್ರಿಗೆ ದೂರು ಕೊಡ್ತೇವಿ. ಅವ್ರು ಬಂದ್ ನಿನ್ನ ಹಿಡಕೊಂಡ್ ಹೋಗ್ತಾರಾ' ಅಂತ ಹೇಳಿದ್ರು. ಆಗ ಅವನು ಹೊಡೆಯುವುದನ್ನು ನಿಲ್ಲಿಸಿದ. ಅಂದು ಹೊಡೆಯುವುದನ್ನು ನಿಲ್ಲಿಸಿದ ಆತ ಆ ಮೇಲೆ ಹೆಂಡತಿ ಮೇಲೆ ಕೈ ಮಾಡಲೇ ಇಲ್ಲವೆಂದು ಆತನ ಹೆಂಡತಿ ಹೇಳುತ್ತಾಳೆ.



ವರದಿ: ಫಕ್ಕೀರಮ್ಮ ಎಸ್ ಲಕ್ಕುಂಡಿ

# ಕೊಪ್ಪಳ ಜಿಲ್ಲೆ

## ಪೂರಕ ಕಾನೂನು ಸುಗಮಗಾರರ ತರಬೇತಿ ಹಂತ 3




ಕೊಪ್ಪಳ ಜಿಲ್ಲೆಯ ಮೂರನೆಯ ಹಂತದ ತರಬೇತಿಯು ಸರ್ವೋದಯ ಸಂಸ್ಥೆಯ ಸಹಭಾಗಿತ್ವದಲ್ಲಿ ನಡೆದಿದ್ದು ಒಟ್ಟು 28( 19 ಮಹಿಳೆಯರು 9 ಪುರುಷರು) ಮಂದಿ ಪೂರಕ ಕಾನೂನು ಸುಗಮಗಾರರು ಭಾಗವಹಿಸಿದ್ದರು. ಮಹಿಳಾ ಪ್ರಕರಣಗಳ ನಿರ್ವಹಣೆ, ದೂರು ಅರ್ಜಿ ಬರವಣಿಗೆ, ಎಫ್‌ಐಆರ್ ಮಧ್ಯಸ್ತಿಕೆ, ವಕಾಲತ್ತು, ಸುಗಮಗಾರಿಕೆ, ಆಪ್ತ ಸಮಾಲೋಚನೆ, ದಾಖಲೆಗಳ ಮಹತ್ವ ಇವುಗಳು ಮುಖ್ಯ ವಿಷಯಗಳಾಗಿದ್ದವು. ತರಬೇತಿಯ ಭಾಗವಾಗಿ ಮಾದಿನೂರು ಗ್ರಾಮದಲ್ಲಿ ಅವಶ್ಯಕ ದಾಖಲೆಗಳ ಕುರಿತು ಸುಗಮಗಾರರು ಮನೆ ಭೇಟಿ ಮಾಡಿ, ಮಾಹಿತಿ ಸಂಗ್ರಹಿಸಿ, ಅದನ್ನು ಕ್ರೋಢೀಕರಿಸಿ ವರದಿ ಮಂಡಿಸಿ ಸಮೀಕ್ಷೆಯ ಪ್ರಾಯೋಗಿಕ ಅನುಭವಗಳನ್ನು ಪಡೆದರು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಯು ಎಸ್ ಸೊಪ್ಪಿನ ಮಠ ಮತ್ತು ಡಿ ರಾಜಣ್ಣ ಹಾಗೂ ನಾರಿ ಅದಾಲತ್ ವೇದಿಕೆಯ ಹನುಮಕ್ಕ ನಿಂಗಪ್ಪ ಸರ್ದಾರಿ ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಮರ್ಲಿನ್ ಮಾರ್ಟಿಸ್, ಮೋಹನಚಂದ್ರ, ತುಕಾರಾಮ ಎಕ್ಕಾರು, ಗುಲಾಬಿ ಬಿಳಿಮಲೆ ವಿವಿಧ ಕಲಾಪಗಳನ್ನು ನಿರ್ವಹಿಸಿದರು. ಜಿಲ್ಲಾ ತರಬೇತಿ ಸಂಯೋಜಕರಾದ ಶರಣಪ್ಪ ಉಪ್ಪಾರ ಸ್ವಾಗತಿಸಿ ಎಲ್ಲರಿಗೂ ವಂದಿಸಿದರು. ಫಕ್ಕೀರಮ್ಮ ಲಕ್ಕುಂಡಿ ಹಾಗೂ ಡೀಡ್ಸ್‌ನ ರಮ್ಯಾ ತರಬೇತಿಗೆ ಸಹಕರಿಸಿದರು.

## ತಳಹಂತದ ಮಾಹಿತಿ ಕಾರ್ಯಕ್ರಮಗಳು



ಮೊದಲ ಹಂತದ ತರಬೇತಿಯು ಸಂಪನ್ನಗೊಂಡಿದ್ದು ಎರಡೂ ಜಿಲ್ಲೆಗಳಿಂದ ಒಟ್ಟು 253 ತರಬೇತಿಗಳಲ್ಲಿ 5675 ಮಹಿಳೆಯರಿಗೆ ಲಿಂಗತ್ವ ಅರಿವನ್ನು ನೀಡಲಾಗಿದೆ. 57,789 ಮನೆಗಳಿಗೆ ಲಿಂಗತ್ವ ಅರಿವು ನೀಡುವ ಪ್ರಚಾರ ಸಾಮಗ್ರಿಗಳನ್ನು ಭಾಗಾರ್ಥಿಗಳು ತಲಪಿಸಿದ್ದಾರೆ. ಎರಡನೆಯ ಹಂತದ ಕಾನೂನು ತರಬೇತಿಯು ಮುಗಿಯುವ ಹಂತದಲ್ಲಿದ್ದು ಈ ವರೆಗೆ ಒಟ್ಟು 223 ತರಬೇತಿಗಳು ನಡೆದಿದ್ದು (ಗದಗದಲ್ಲಿ 122, ಕೊಪ್ಪಳದಲ್ಲಿ 101) ಒಟ್ಟು 5053



ಮಹಿಳೆಯರು ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಮೂರನೆಯ ಹಂತದ ತರಬೇತಿಯು ವೈಯಕ್ತಿಕ ದಾಖಲೆಗಳ ಮಹತ್ವದ ಕುರಿತು ನಡೆಯುತ್ತಿದ್ದು ಈವರೆಗೆ ಗದಗದಲ್ಲಿ 95, ಕೊಪ್ಪಳದಲ್ಲಿ 37 ತರಬೇತಿಗಳು ನಡೆದಿವೆ. ಒಟ್ಟು 3035 ಮಂದಿ ಭಾಗಾರ್ಥಿಗಳು ತರಬೇತಿಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.

### ಪೂರಕ ಕಾನೂನು ಸುಗಮಗಾರರ ಹಾಗೂ ಭಾಗಾರ್ಥಿಗಳ ಲಿಂಗತ್ವ ಜ್ಞಾನ ಮಾಪನ

ಪ್ರಶ್ನಾವಳಿಯ ಮೂಲಕ ತರಬೇತುಗೊಂಡ ಸುಗಮಗಾರರ ಲಿಂಗತ್ವ ಜ್ಞಾನವನ್ನು ಪರೀಕ್ಷಿಸಿದಾಗ ಅದು ಗದಗಿನಲ್ಲಿ 81.5% ಹಾಗೂ ಕೊಪ್ಪಳದಲ್ಲಿ 79.2% ರಷ್ಟು ಇರುವುದು ಕಂಡು ಬಂದಿದೆ. ತರಬೇತಿ ಪೂರ್ವದಲ್ಲಿ ಗದಗಿನಲ್ಲಿ ಅದು 75% ಹಾಗೂ ಕೊಪ್ಪಳದಲ್ಲಿ 79.2% ಕಂಡುಬಂದಿತ್ತು.

ಭಾಗಾರ್ಥಿಗಳ ಲಿಂಗತ್ವ ಅರಿವಿನ ಮೌಲ್ಯ ಮಾಪನದಲ್ಲಿ ಎರಡೂ ಜಿಲ್ಲೆಗಳಲ್ಲಿ ಒಟ್ಟಾಗಿ 41% ಭಾಗಾರ್ಥಿಗಳು 80% ಕ್ಕಿಂತ ಹೆಚ್ಚು ಲಿಂಗತ್ವ ಜ್ಞಾನವನ್ನು ಹೊಂದಿರುವುದು ತಿಳಿದು ಬಂದಿದೆ (ಕೊಪ್ಪಳದಲ್ಲಿ 38.96%, ಗದಗದಲ್ಲಿ 42.22%.). ಮಾಹಿತಿಯನ್ನು ಪಡೆದುಕೊಂಡ ಕೆಲ ಮಹಿಳೆಯರು ಈಗಾಗಲೇ ತಮ್ಮ ಹಾಗೂ ತಮ್ಮ ಸುತ್ತ ಮುತ್ತಲಿನ ಸಮಸ್ಯೆಗಳಿಗೆ ಕಾನೂನನ್ನು ಬಳಸಿಕೊಳ್ಳುವತ್ತ ಸಿದ್ಧತೆಯನ್ನು ಮಾಡಿಕೊಂಡಿರುವುದು ಸಂತಸಕರವೂ ಆಶಾದಾಯಕವೂ ಆಗಿದೆ.

### ಹೊಸ ಸುಗಮಗಾರರಿಗೆ ತರಬೇತಿ

ಪರಿಣತಿ ಹೊಂದಿದ ಸುಗಮಗಾರರು ಅವರ ಜಿಲ್ಲೆಯ ಹೊಸ ಸುಗಮಗಾರರಿಗೆ 3ನೇ ಹಂತದ ಮಹಿಳಾ ಪ್ರಕರಣಗಳ ನಿರ್ವಹಣೆ ಬಗೆಗಿನ 1 ದಿನದ ತರಬೇತಿಯನ್ನು ನೀಡಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ತರಬೇತಿಯಲ್ಲಿ 28 ಮಂದಿ ಭಾಗವಹಿಸಿದ್ದು ವತ್ಸಲಾ, ಕಮಲಾ ಗೌಡ, ಲಿಲ್ಲಿ ಮೇರಿ, ಹರಿಣಿ, ವೈಷ್ಣವಿ, ತುಕಾರಾಮ, ಗದಗದಲ್ಲಿ 14 ಮಂದಿ ಭಾಗವಹಿಸಿದ್ದು ಪ್ರಭಾವತಿ ಬೆಟಗೇರಿ, ಉಮಾ ಬಾರ್ಕಿ, ತುಕಾರಾಮ, ಫಕ್ಕೀರಮ್ಮ, ಚಿತ್ರದುರ್ಗ ಜಿಲ್ಲೆಯಲ್ಲಿ 21 ಮಂದಿ ಭಾಗವಹಿಸಿದ್ದು ಪಿ ಎಂ ಸುಮಾ, ಗೀತಾ ಬಿ, ಬಿ ಪರಮ್ಮ, ಕೊಪ್ಪಳದಲ್ಲಿ 11 ಮಂದಿ ಭಾಗವಹಿಸಿದ್ದು ಜ್ಯೋತಿ ಗೊಂಡಬಾಳ ಮತ್ತು ಕಲ್ಲಪ್ಪ ತಳವಾರ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.



ವರದಿ : ಶರಣಪ್ಪ, ಉಪ್ಪಾರ

ಮುಖಪುಟ ವಿನ್ಯಾಸ: ಸುನೈಫ್ ವಿಟ್ಲ
ಮುದ್ರಣ: ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್), ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. 575002, ದೂರವಾಣಿ: 0824–2217022, 4281037
E-mail: deeds82@rediffmail.com, Website: www.deedsmangaluru.in